ಆದ ಮೇಲೆ ಅವೆಲ್ಲಾ ಆಭರಣ ಕಳಚಿಟ್ಟು ಸರಳ ಅಲಂಕಾರದಲ್ಲಿ ವೆಂಕಟೇಶ ಉಳಿದ ಭಕ್ತರಿಗೆ ಕಾಣಿಸಿಕೊಳ್ಳುತ್ತಾನೆ. ಲಕ್ಷಗಟ್ಟಲೆ ಖರ್ಚು ಮಾಡಿದವರಿಗೆ ಮಾತ್ರ ನೋಡಲು ಸಿಗುವ ಆ ವಿಶಿಷ್ಟಾಭರಣಾಲಂಕೃತವಾದ ಎಲ್ಲಾ ಪೂಜಾ ವೈಶಿಷ್ಟ್ಯಗಳನ್ನು ಅಲ್ಲಿದ್ದ ದಿನಗಳಲ್ಲಿ ಒಂದು ನಯಾಪೈಸೆ ಖರ್ಚಿಲ್ಲದೆ ನಾನು ನೋಡಿಬಿಟ್ಟೆ. ಆದರೆ ಮಹರ್ಷಿ ಮಹೇಶ ಯೋಗಿಗಳ ಅಪರಾಹ್ನದ ವೀಡಿಯೋ ತರಗತಿಗಳಲ್ಲಿ ನಾನು ಗಾಢ ನಿದ್ದೆಗೆ ಜಾರಿ ಬಿಡುತ್ತಿದ್ದೆ!

ನಮ್ಮ ಶಿಬಿರದ ನಿರ್ದೇಶಕರು ಶಿವಮೊಗ್ಗ ಕಡೆಯ ಒಬ್ಬರು ಲಾಯರು. ಪಾಠಕ್ಕೆ ಮಾರ್ಗದರ್ಶನ ಮಾಡಲು ದಿನಕ್ಕೊಬ್ಬರು ಬರುತ್ತಿದ್ದರು. ಅವರೆಲ್ಲಾ ದೊಡ್ಡ ದೊಡ್ಡ ಉದ್ಯೋಗಗಳಲ್ಲಿ ಇರುವವರು. ಅವರು ಮಹರ್ಷಿ ಮಹೇಶ ಯೋಗಿಗಳ ಮೇಲಣ ಗೌರವದಿಂದ ಬಿಟ್ಟಿಯಾಗಿ ದುಡಿಯುತ್ತಿದ್ದರೋ ಅಥವಾ ಕೈತುಂಬಾ ಗೌರವ ಧನ ಸಿಗುತ್ತದೆಂದು ಬರುತ್ತಿದ್ದರೋ ತಿಳಿಯದು. ದಿನಕ್ಕೊಬ್ಬ ಮಾರ್ಗದರ್ಶಕರು ಬರುತ್ತಿದ್ದುದರಿಂದ ನಮಗೆ ಅವರನ್ನು ಆಪ್ತವಾಗಿ ತಿಳಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಅವರು ನಮ್ಮ ಆಧ್ಯಾತ್ಮಿಕ ಸಂದೇಹಗಳನ್ನು ನಿವಾರಿಸಲು ಕಾತರರಾಗಿ ತುದಿಗಾಲಲ್ಲಿ ನಿಂತಿರುತ್ತಿದ್ದರು. ದುರದೃಷ್ಟಕ್ಕೆ ನಮ್ಮಲ್ಲಿ ಸಂದೇಹಗಳೇ ಮೂಡುತ್ತಿರಲಿಲ್ಲ!

ಎರಡನೆಯ ವಾರದಲ್ಲಿ ನಮಗೆ ಅತೀಂದ್ರಿಯ ಧ್ಯಾನ ಮಾಡುವ ವಿಧಾನವನ್ನು ಹೇಳಿಕೊಟ್ಟರು. ಥಿಯರಿಯಿಂದ ಪ್ರಾಕ್ಟಿಕಲ್ಲಿಗೆ! ಅಂದು ಬೆಳಿಗ್ಗೆ ಪೂರ್ವ ಸೂಚನೆಯಂತೆ ನಾವು ಸ್ಟೀಲಿನ ಹರಿವಾಣ ತುಂಬಾ ಹಣ್ಣು ಹಂಪಲಿಟ್ಟು ಮೇಲೊಂದು ಐವತ್ತರ ನೋಟಿದ್ದು ಆ ಅಲೌಕಿಕ ಸಂದರ್ಭಕ್ಕಾಗಿ ಚಾತಕ ಪಕ್ಷಿಗಳಂತೆ ಕಾದೆವು. ನನ್ನ ಯೋಗ ಕೂಡಿ ಬಂದಾಗ ಅಪಾರ ನಿರೀಕ್ಷೆಯೊಂದಿಗೆ ನಮ್ಮ ಆಧ್ಯಾತ್ಮಿಕ ಗುರುಗಳಿದ್ದ ವಿಶಾಲವಾದ ಕೊಠಡಿಯನ್ನು ಹೊಕ್ಕೆ. ಅಲ್ಲಿ ಎತ್ತರದ ಪೀಠದಲ್ಲಿ ಮಹರ್ಷಿ ಮಹೇಶ ಯೋಗಿಗಳ ಅರ್ಧ ಆಳೆತ್ತರದ ಭಾವಚಿತ್ರವಿತ್ತು. ಅವರ ಮುಖದಲ್ಲಿ ಕಪಟವಿರಲಿಲ್ಲ. ಚಿತ್ರದ ಕೆಳಗಡೆ ನನ್ನ ನೂತನ ಅಧ್ಯಾತ್ಮ ಗುರು ಪದ್ಮಾಸನದಲ್ಲಿ ಕೂತಿದ್ದರು. ಕೋಣೆಯಲ್ಲಿ ಕಾಲ್ದೀಪದ ಬೆಳಕು ಮಾತ್ರವಿತ್ತು. ಘನ ಗಂಭೀರತೆಯ ನೀರವ ವಾತಾವರಣ. ಗುಂಡುಸೂಜಿ ಬಿದ್ದರೂ ಕೇಳುವ ನಿಶ್ಶಬ್ದ.

ನಾನು ತಟ್ಟೆಯನ್ನು ಅಧ್ಯಾತ್ಮ ಗುರುಗಳೆದುರು ಇಟ್ಟು ನಮಸ್ಕರಿಸಿದೆ. ಅರೆ ನಿಮೀಲಿನ ನೇತ್ರರಾಗಿ ಕುಳಿತಿದ್ದ ಗುರುಗಳು ಸಂಪ್ರೀತರಾಗಿ ಅನುಗ್ರಹಿಸಿದರು. ಅವರಂತೆ ನಾನೂ ಪದ್ಮಾಸನದಲ್ಲಿ ಕುಳಿತುಕೊಂಡೆ. ಅವರು ಇನ್ನಷ್ಟು ಸಂಪ್ರೀತರಾದಂತೆ ಕಂಡಿತು. ಕಣ್ಣು ಮುಚ್ಚಿಕೊಳ್ಳುವಂತೆ ಸಂಜ್ಞೆಯಿಂದ ನನಗೆ ತಿಳಿಸಿದರು. ಅವರ ಆಜ್ಞೆಯನ್ನು ಶಿರೋಧಾರ್ಯವೆಂದು ಪಾಲಿಸಿದೆ. ಅವರು ಸಮಸ್ತ ವಿಶ್ವವನ್ನು ಗೆಲ್ಲಬಲ್ಲ ಅಪೌರುಷೇಯ ಗುಹ್ಯಾತಿಗುಹ್ಯ ಪರಮಪವಿತ್ರ ಪರಂಜ್ಯೋತಿ ಸ್ವರೂಪದ ಅತೀಂದ್ರಿಯ ಧ್ಯಾನದ ಬೀಜ ಮಂತ್ರವನ್ನು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು.

ಅಯ್ಯೀsssssಂಗ್.

ನಾನು ಬೆಚ್ಚಿಬಿದ್ದೆ. ಆದರೆ ಕಣ್ಣು ಬಿಡುವಂತಿರಲಿಲ್ಲ. ಗುರುಗಳ ಆಗ್ರಹಕ್ಕೆ ತುತ್ತಾದರೆ? ಆ ಬೀಜಮಂತ್ರವನ್ನು ನನ್ನ ಜೀವನದಲ್ಲಿ ಮೊದಲ ಬಾರಿಗೆ ಕೇಳಿದ್ದು. ಹಾಗಂದರೇನು? ಅದು ಯಾವ ಭಾಷೆಯದ್ದು? ಅದನ್ನು ನಾನ್ಯಾಕೆ ಹೇಳಬೇಕು? ಒಂದೂ ಅರ್ಥವಾಗಲಿಲ್ಲ.

ಅಧ್ಯಾತ್ಮ ಗುರುಗಳ ಘನಗಂಭೀರ ಧ್ವನಿ ಕೇಳಿಸಿತು.

ಇದು ಕಿವಿಯಿಂದ ಕಿವಿಗೆ ಹೋಗಬೇಕಾದ ಮೌಖಿಕ ಬೀಜಮಂತ್ರ. ಇದನ್ನು ಬೇರೆಯವರೆದುರು ಗಟ್ಟಿಯಾಗಿ ಹೇಳಬಾರದು. ಗುರುಮುಖೇನ ಮಾತ್ರವೇ ಕಲಿತುಕೊಳ್ಳಬೇಕು. ನಾಳೆ ನೀನೂ ಗುರುವಾದ ಮೇಲೆ ಇದನ್ನು ಬೇರೆಯವರಿಗೆ ಹೇಳಿಕೊಡುವ ಅರ್ಹತೆ ನಿನಗೆ ಸಿಗುತ್ತದೆ. ಬೆಳಿಗ್ಗೆ ಮತ್ತು ಸಂಜೆ ಇದನ್ನು ದಿವ್ಯ ಮೌನದ ವಾತಾವರಣದಲ್ಲಿ ಒಬ್ಬಂಟಿಯಾಗಿ ಅಭ್ಯಾಸ ಮಾಡು. ಕಣ್ಣು ತೆರೆಯದೆ ಈಗ ಇದನ್ನು ಮನಸ್ಸಿನಲ್ಲೇ ಧ್ಯಾನಿಸುತ್ತಾ ಹೋಗು. ಏಳೆಂಟು ನಿಮಿಷವಾಗುವಾಗ ನೀನು ನಾದಬ್ರಹ್ಮನಲ್ಲಿ ಸಂಪೂರ್ಣವಾಗಿ ಲೀನನಾಗಿ ಬಿಡುತ್ತೀಯೆ. ಆಗ ನಿನ್ನ ಎದೆ ಬಡಿತ, ರಕ್ತದ ಹರಿವು ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುತ್ತದೆ. ಅತೀಂದ್ರಿಯ ಧ್ಯಾನ ನಿನಗೆ ಅನಿರ್ವಚನೀಯ ಸ್ವರ್ಗೀಯ ಆನಂದವನ್ನು ನೀಡುತ್ತದೆ. ಈ ಜಗದ ಸಕಲ ಜಂಜಡಗಳಿಂದ ನಿನ್ನನ್ನು ತುಂಬಾ ಎತ್ತರಕ್ಕೆ ನಿಲ್ಲಿಸುತ್ತದೆ. ಯೂ ವಿಲ್ ಬಿ ಆಲ್ಟುಗೆದರ್ ಎ ಸೂಪರ್ ಹ್ಯೂಮನ್ ಬೀಯಿಂಗ್.

ನಾನು ಅಧ್ಯಾತ್ಮ ಗುರುಗಳ ಮಹದಾಜ್ಞೆಯನ್ನು ಶಿರಸಾ ವಹಿಸಿ ಅಯ್ಯೀsssssಂಗ್ ಎಂದು ನಿಶ್ಶಬ್ದವಾಗಿ ಹೇಳುತ್ತಾ ಹೋದೆ. ಸುಮಾರು ಹದಿನೈದು ನಿಮಿಷ ಅತೀಂದ್ರಿಯ ಧ್ಯಾನದ ತುರೀಯಾವಸ್ಥೆಗೆ ಮುಟ್ಟಲು ಇನ್ನಿಲ್ಲದ ಯತ್ನ ಮಾಡಿದೆ. ಸ್ವಲ್ಪ ಹೊತ್ತಲ್ಲಿ ನನಗೆ ತಿಮ್ಮಪ್ಪನ ಸಿಹಿ ಪೊಂಗಲ್ ನೆನಪಾಗತೊಡಗಿತು. ಇನ್ನೊಂದು ಕೊಠಡಿಯಲ್ಲಿ ಹೀಗೆ ಧ್ಯಾನ ಮಾಡುತ್ತಿರುವ ರಾಘವ ಹೆಗ್ಡೆ ನೆನಪಾದರು. ಅವರಿಗೆ ಧ್ಯಾನ, ಯೋಗಗಳೆಂದರೆ ಇಮಾಂಸಾಬಿಗೆ ಗೋಕುಲಾಷ್ಟಮಿ ಇದ್ದಂತೆ. ಆದರೂ ಪಾಪ ಉದರನಿಮಿತ್ತಂ...

'ಇನ್ನು ಕಣ್ಣು ತೆರಿ. ನೋಡು ಎಂತಹ ಅಲೌಕಿಕ, ಪಾರಮಾರ್ಥಿಕ ಅನುಭೂತಿ ನಿನ್ನದಾಯಿತು. ನಿನ್ನ ಈ ಅಪೂರ್ವ ಅನುಭವವನ್ನು ಎಲ್ಲರೊಡನೆ ಹಂಚಿಕೋ. ಆದರೆ ನೆನಪಿರಲಿ, ಬೀಜಮಂತ್ರವನ್ನು ಯಾರಲ್ಲೂ ಹೇಳಿ ಬಿಡಬೇಡ. ಇಂದು ಕಾಲು ಗಂಟೆ. ಇನ್ನು ಮುಂದೆ ದಿನಾ ಅರ್ಧಗಂಟೆ ಅತೀಂದ್ರಿಯ ಧ್ಯಾನ ಮಾಡು. ಶ್ರೀ ಗುರುಕಾರುಣ್ಯಕ್ಕೆ ಪಾತ್ರನಾಗು.'

ನಾನು ಪಾರಮಾರ್ಥಿಕ ಗುರುವಿಗೆ ವಂದಿಸಿ ಲೌಕಿಕ ಪ್ರಪಂಚಕ್ಕೆ ಕಾಲಿಟ್ಟೆ.

ಆ ವಿಡಿಯೊ ಪಾಠವನ್ನು ಹೇಗಾದರೂ ತೂಕಡಿಸುತ್ತಾ ಕೇಳಬಹುದು. ಈ ಅಯ್ಯೀssssಂಗನ್ನು ಅರ್ಧಗಂಟೆ ಕಣ್ಮುಚ್ಚಿಕೊಂಡು ಹೇಳುತ್ತಾ ಕೂರೋದು ಹೇಗೆ?

ರಾಘವ ಹೆಗ್ಡೆಗೆ ಬೇರೆ ಬೀಜಮಂತ್ರ ಉಪದೇಶಿಸಿರಬಹುದೇನೋ ಎಂದುಕೊಂಡಿದ್ದೆ. ಐವತ್ತು ಜನರಿಗೂ ಬೀಜಮಂತ್ರ ಒಂದೇ!

ಶ್ಶ್... ನಾನು ತುಟಿಯ ಮೇಲೆ ಬೆರಳಿಟ್ಟೆ. ಇದು ಅಲೌಕಿಕ ಅಪೌರುಷೇಯ, ಗುಹ್ಯಾತಿಗುಹ್ಯ, ಪರಮ ಪವಿತ್ರ, ಪರಮಾತ್ಮ ಸ್ವರೂಪಿ ಬೀಜಮಂತ್ರ. ನಾನು ಎಕನಾಮಿಕ್ಸಿನವನೇ ತಕರಾರಿಲ್ಲದೆ ಒಪ್ಪಿಕೊಂಡಿದ್ದೇನೆ. ಇನ್ನು ಎರಡು ವರ್ಷ ಸೈಕಾಲಜಿ ಹೇಳಿಸಿಕೊಂಡವರದ್ದೇನು ಕೊಂಕು?

ಮರುದಿನ ವಿಡಿಯೊ ಪಾಠದ ಬಳಿಕ ಮಾರ್ಗದರ್ಶಕರಲ್ಲಿ ನನ್ನ ಸಂದೇಹ ಮುಂದಿಟ್ಟೆ.

ಓಂಕಾರ ಹೇಳುತ್ತಾ ದೀಪಧ್ಯಾನ ಮಾಡುವಾಗಿನ ಅನುಭವ, ಸಿಗುವ ಅನುಭೂತಿ ಈ ಅತೀಂದ್ರಿಯ ಧ್ಯಾನದಲ್ಲಿ ಸಿಗುತ್ತಿಲ್ಲ. ಏನು ಮಾಡಲಿ?

ಅವರು ಮಾತ್ರವಲ್ಲ, ಇಡೀ ಬ್ಯಾಚು ನನ್ನನ್ನು ಅನ್ಯ ಗೆಲಾಕ್ಸಿಯ ಅನೂಹ್ಯ ಗ್ರಹದ ಅಪರೂಪದ ವಿಚಿತ್ರ ಜೀವಿಯೆಂಬಂತೆ ನೋಡಿತು. ಒಂದು, ಈವರೆಗೆ ಯಾರೂ ಒಂದೇ ಒಂದು ಪ್ರಶ್ನೆ ಮಾರ್ಗದರ್ಶಕರಲ್ಲಿ ಕೇಳಿರಲಿಲ್ಲ.




ಬಕನ ಧ್ಯಾನಕ್ಕೆ
ಮರುಳಾಗಿ
ಕೊಳದ ನೀರು ಅಲೆಗಳಾಗಿ
ಪಾದವ ತೊಳೆಯುತ್ತಿವೆ

**

ಮುಗಿಲು ಮಾತಿನ
ಮಳೆಗರೆಯಿತು
ಕಪ್ಪೆಗಳು ಚಪ್ಪಾಳೆ ತಟ್ಟಿ
ತಮಟೆ ಬಾರಿಸಿದವು

**

ಬಿಸಿಲಲ್ಲಿ ಮರದ ಮೇಲೆ
ಮುಗಿಲ ನೆರಳು ಬಿತ್ತು
ಮರಕ್ಕೆ ತಾಯಿಯ ನೆನಪಾಯಿತು

■ **ಜರಗನಹಳ್ಳಿ ಶಿವಶಂಕರ್**